<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ</u>

<u>ಸಿ.ಸಿ.ನಂ.42/2023</u>

| | | | |
|---|---|---|---|
| ಹೆಸರು | : | ರಂಗನಾಥ | ಸಿ .ಡಬ್ಲ್ಯೂ :2 |
| ತಂದೆ ಹೆಸರು | : | ರಂಗಶಾಮಯ್ಯ | ಪಿ .ಡಬ್ಲ್ಯೂ 2 |
| ವಯಸ್ಸು | : | 36 ವರ್ಷ | |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ತರ್ಟಿ ಗ್ರಾಮ , ಕೊರಟಗೆರೆ ತಾಲ್ಲೂಕು | |

ಸಾಕ್ಷಿಯನ್ನು ದಿಃ 11-08-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ಚಾಸಾ -1, 3 ಮತ್ತು 4 ಗೊತ್ತು . 1 ರಿಂದ 4 ನೇ ಆರೋಪಿತರುಗಳನ್ನು ನೋಡಿದ್ದೇನೆ .

ದಿಃ 04-12-2022 ರಂದು ಅಡಿಕೆ ವ್ಯಾಪಾರಕ್ಕೆಂದು ಚಾಸಾ -1 ರವರ ತೋಟದ ಬಳಿಗೆ ಹೋಗಿದ್ದೆ . ಆಗ ಸಮಯ ಬೆಳಗ್ಗೆ 8.30 ಗಂಟೆಯಾಗಿತ್ತು . ಚಾಸಾ -1 ರವರು 2 ನೇ ಆರೋಪಿತರಿಗೆ ತೋಟದಲ್ಲಿ ಟ್ರ್ಯಾಕ್ಟರ್ ಹೊಡೆಯಬೇಡಿ ಎಂದು ಹೇಳುತ್ತಿದ್ದರು . 2 ನೇ ಆರೋಪಿತರು ದೊಣ್ಣೆಯೊಂದರಿಂದ ಚಾಸಾ -1 ರವರ ತಲೆಯ ಹಿಂಭಾಗಕ್ಕೆ ಹಲ್ಲೆ ಮಾಡಿದರು . 1,3 ಮತ್ತು 4 ನೇ ಆರೋಪಿತರುಗಳು 2 ನೇ ಆರೋಪಿತರಿಗೆ ಏನಾಗುತ್ತದೆಯೋ ನೋಡೋಣಾ ಕಲ್ಲು ಕಟ್ಟಿ ಅವರನ್ನು ಬಾವಿಗೆ ಹಾಕೋಣಾ ಎಂದು ಹೇಳುತ್ತಿದ್ದರು . ನಾನು ಮತ್ತು ಚಾಸಾ -3 ರವರು ಗಲಾಟೆ ಬಿಡಿಸಿದೆವು . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮು ಮಾ -1 ನ್ನು ನೋಡಿ ಗುರುತಿಸಿದ್ದಾರೆ . ಮೇಲಿನ ವಿಚಾರಗಳನ್ನು ತಿಳಿಸಿ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

<u>ಪಾಟೀಸವಾಲುಃ ಸ ಸ ಅ ರವರಿಂದಃ</u>-

ಗಲಾಟೆಯ ಸಮಯ 1,3 ಮತ್ತು 4 ನೇ ಆರೋಪಿತರುಗಳು ಚಾಸಾ -1 ರವರಿಗೆ ಕೈಗಳಿಂದ ಬೆನ್ನಿನ ಮೇಲೆ ಗುದ್ದಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದರೆ ಸರಿ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ನಾನು ಚಾಸಾ -1 ರವರ ಅಕ್ಕನ ಮಗ ಎಂದರೆ ಸರಿ . ಚಾಸಾ -3 ರವರು ಚಾಸಾ -1 ರವರ ಮನೆಯ ವಧುವನ್ನು ವಿವಾಹವಾಗಿದ್ದಾರೆ ಎಂದರೆ ಸರಿ .

ಮೇಲೆ ಹೇಳಿದ ದಿನಾಂಕದಂದು ಬೆಳಗ್ಗೆ 6.45 ಕ್ಕೆ ನಮ್ಮ ಗ್ರಾಮದಿಂದ ಹೊರಟಿದ್ದೆ . ಮೇಲೆ ಹೇಳಿದ ದಿನಾಂಕದಂದು ನಾನು ಚಾಸಾ -1 ರವರ ಅಡಿಕೆ ತೋಟದ

ಬಳಿ ಬಂದಿಲ್ಲ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾನು ಹೇಳಿದಂತಹ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಯಾರ ತೋಟಕ್ಕೆ ಅಡಿಕೆ ಖರೀದಿಗೆ ಹೋಗಿದ್ದಿರಿ ಎಂದರೆ ಸಾಕ್ಷಿಯು ಚಾಸಾ -1 ರವರು ತೋಟ ತೋರಿಸುವುದಾಗಿ ಹೇಳಿ ಕರೆಸಿದ್ದರು ಎಂದು ಹೇಳಿದ್ದಾರೆ . ಸಾಧಾರಣವಾಗಿ ಅಡಿಕೆ ವ್ಯಪಾರ ಏಪ್ರಿಲ್ ತಿಂಗಳಿನಿಂದ ಆಗಸ್ಟ ತಿಂಗಳೊಳಗಾಗಿ ಮುಗಿಯುತ್ತದೆ ಎಂದರೆ ಸರಿಯಲ್ಲ. ಚಾಸಾ-1 ರವರ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ತಿಳಿದಿಲ್ಲ. ನಿಟ್ಟೂರಿನಲ್ಲಿ ಚಾಸಾ -1 ರವರಿಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿಯು ಅವರ ತಂದೆಯ ಹೆಸರಿನಲ್ಲಿದೆ ಎಂದು ತಿಳಿಸಿದ್ದಾರೆ . ಆರೋಪಿತರುಗಳು ಯಾವ ನೋಂದಣಿ ಸಂಖ್ಯೆಯ ಟ್ರ್ಯಾಕ್ಟರ್ ನಲ್ಲಿ ಬಂದಿದ್ದರು ಎಂದು ಗೊತ್ತಿಲ್ಲ . ಆರೋಪಿತರುಗಳು ಯಾವ ದಿಕ್ಕಿನಿಂದ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದರು ಎಂದು ಹೇಳಲು ಗೊತ್ತಾಗುತ್ತಿಲ್ಲ . ನಾನು ಹೇಳುವಂತೆ ಆರೋಪಿತರುಗಳು ಚಾಸಾ -1 ರವರ ಮೇಲೆ ಹಲ್ಲೆ ಮಾಡಿಲ್ಲ ಮತ್ತು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ 2 ನೇ ಆರೋಪಿತರು ಮಮಾ -1 ರಿಂದ ಚಾಸಾ -1 ರವರ ತಲೆಯ ಹಿಂಭಾಗಕ್ಕೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ 1, 3 ಮತ್ತು 4 ನೇ ಆರೋಪಿತರುಗಳು ತಮ್ಮ ಕೈಗಳಿಂದ ಚಾಸಾ -1 ರವರ ಬೆನ್ನಿನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ಹೇಳುವಂತೆ 1, 3 ಮತ್ತು 4 ನೇ ಆರೋಪಿತರುಗಳು 2 ನೇ ಆರೋಪಿತರಿಗೆ ಏನಾಗುತ್ತದೆಯೋ ನೋಡೋಣಾ ಕಲ್ಲು ಕಟ್ಟಿ ಅವರನ್ನು ಬಾವಿಗೆ ಹಾಕು ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಗಲಾಟೆ ನಡೆದಿಲ್ಲ , ಆದುದರಿಂದ ನಾನು ಮತ್ತು ಚಾಸಾ -2 ರವರು ಗಲಾಟೆ ಬಿಡಿಸುವ ಪ್ರಮೇಯವೇ ಉದ್ಭವಿಸಿಲ್ಲ, ನಾನು ಚಾಸಾ -1 ರವರ ಅಕ್ಕನ ಮಗನಾಗಿರುವ ಕಾರಣ ಅವರಿಗೆ ಈ ಪ್ರಕರಣದಲ್ಲಿ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.